

# ಶಿಲೆಯೊಳಗಿನ ಇತಿಹಾಸ



## ಭುಜ್ ಚತ್ತರ್ಧಿಗಳ ಅಜರಾಮರ ಕಥೆ

■ ಜಿ. ನಾಗೇಂದ್ರ ಕಾವೂರು

ಗುಜರಾತಿನ ಕಛ್ ಪ್ರದೇಶದ ಹೃದಯ ಭಾಗದಲ್ಲಿರುವ ಭುಜ್ ನಗರವು ತನ್ನ ವಿಶಿಷ್ಟ ವಾಸ್ತುಶಿಲ್ಪ, ಇತಿಹಾಸ ಮತ್ತು ಸಂಸ್ಕೃತಿಗೆ ಹೆಸರುವಾಸಿ. ಈ ನಗರವು ಕಛ್‌ನ ರಾಜಧಾನಿಯಾಗಿದ್ದ ಕಾಲದಲ್ಲಿ ರಾಜವಂಶಗಳ ಹಿರಿಮೆ, ಯುದ್ಧದ ವೀರತೆ ಮತ್ತು ಕಲಾತ್ಮಕ ಪರಂಪರೆಗಳ ಕೇಂದ್ರವಾಗಿತ್ತು. ಈ ವೈಭವದ ನೆನಪಾಗಿ ನಿಂತಿವೆ ಭುಜ್ ಚತ್ತರ್ಧಿಗಳು (ಚತ್ತರ್ಧಿ ಎಂದರೆ ಛತ್ರಿಗಳು ಎಂದರ್ಥ).

ಬೃಹತ್ ಆವರಣದ ಮಧ್ಯದಲ್ಲಿರುವ ಆಕರ್ಷಕ ವಾಸ್ತುಶಿಲ್ಪದಿಂದ ಮನಸೆಳೆಯುವ ಛತ್ರಿಯ ಆಕಾರದಲ್ಲಿರುವ ಈ ಚತ್ತರ್ಧಿಗಳು ಜಡೇಜ ರಾಜವಂಶಸ್ಥರ ಕಾಲದ ಸ್ಮಾರಕ ಸಮಾಧಿಗಳು. ಇವು ಕೇವಲ ಶಿಲ್ಪಕಲೆಗಷ್ಟೇ ಸೀಮಿತವಾಗಿರದೆ ಕಛ್‌ನ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಮನೋಭಾವವನ್ನು ಪ್ರತಿಬಿಂಬಿಸುತ್ತವೆ.